





# ಪುಷ್ಪಸಂಸ್ಕೃತಿ

**‘ಪ್ರೇಮಿಗಳ ದಿನ’ದ ಸಂದರ್ಭದಲ್ಲಿ ಕೊಲಂಬಿಯಾದ ಪುಷ್ಪೋದ್ಯಮ ಮುನ್ನೆಲೆಗೆ ಬರುತ್ತದೆ. ಅದು ಬರಿ ವಹಿವಾಟಲ್ಲ, ಅದೊಂದು ಸಂಸ್ಕೃತಿ.**

**■ ವಿ.ಆರ್.**

ಫೆಬ್ರುವರಿ 14ರ ‘ಪ್ರೇಮಿಗಳ ದಿನ’ ಸನ್ನಿಹಿತ ಆಗುತ್ತಿರುವಂತೆ ಕೊಲಂಬಿಯಾದ ಹೂಪೇಟೆಯಲ್ಲಿ ಬಿಡುವಿಲ್ಲದ ಚಟುವಟಿಕೆ, ನವಿರಾದ ರೋಮಾಂಚನ. ಹೂಗಳ ರಫ್ತಿಗೆ ಕೊಲಂಬಿಯಾ ವಿಶ್ವದಲ್ಲಿ ಎರಡನೇ ಸ್ಥಾನದಲ್ಲಿದೆ. ಮೊದಲ ಸ್ಥಾನ ನೆದರ್ಲೆಂಡ್ಸ್‌ನದ್ದು.

‘ಪ್ರೇಮಿಗಳ ದಿನ’ದ ಸಂದರ್ಭದಲ್ಲಿ ಲಕ್ಷ ಲಕ್ಷ ಹೂಗಳು ಕೊಲಂಬಿಯಾದಿಂದ ವಿಶ್ವದ ಬೇರೆ ಬೇರೆ ದಿಕ್ಕುಗಳಿಗೆ ಪಯಣ ಬೆಳೆಸುತ್ತವೆ. ಪ್ರೇಮಿಗಳಿಗೆ ಪ್ರಿಯವಾದ ಗುಲಾಬಿಗಳು ಸೇರಿದಂತೆ ಬಗೆ ಬಗೆ ಬಣ್ಣದ ಹೂಗಳು ವಿಮಾನ ಹತ್ತುತ್ತವೆ. ಯಾವುದೋ ದೇಶ–ಸಂಸ್ಕೃತಿಯ ತರುಣ ತರುಣಿಯರ ಕೈಗಳಲ್ಲಿ ಕೊಲಂಬಿಯಾದ ಮಣ್ಣಲ್ಲಿ ಅರಳಿದ ಹೂವುಗಳು! ಪ್ರೇಮದ ಭಾಷೆಗೆ ಹೂವಿಗಿಂಥ ಸೊಗಸಾದ ಅಭಿವ್ಯಕ್ತಿ ಮತ್ತೊಂದುಂಟೆ?

ಅಂದಹಾಗೆ, ಹೂಗಳ ರಫ್ತಿಗಷ್ಟೇ ಕೊಲಂಬಿಯಾ ಹೆಸರುವಾಸಿಯಲ್ಲ. ಪೆಟ್ರೋಲಿಯಂ, ಕಾಫಿ, ಚಿನ್ನ, ಕಲ್ಲಿದ್ದಲ ರಫ್ತಿನಲ್ಲೂ ಮುಂಚೂಣಿಯಲ್ಲಿದೆ. ಆದರೆ, ಈ ರಫ್ತುಪಟ್ಟಿಯಲ್ಲಿ ಮೋಹಕವಾಗಿ ಎದ್ದುಕಾಣಿಸುವುದು ಹೂಗಳ ರುಜು. ಪುಷ್ಪಲೋಕಕ್ಕೆ ಸಂಬಂಧಿಸಿದ ಕೊಲಂಬಿಯಾದ ಗರಿಮೆಯನ್ನು ಗಮನಿಸಿ. ವಿಶ್ವದಲ್ಲಿ ಹೆಚ್ಚು ಸಂಖ್ಯೆಯ ಆರ್ಕಿಡ್‌ಗಳು ಕಂಡುಬರುವುದು ಕೊಲಂಬಿಯಾದಲ್ಲೇ. 4 ಸಾವಿರಕ್ಕೂ ಹೆಚ್ಚು ಪ್ರಭೇದಗಳ ಆರ್ಕಿಡ್‌ಗಳು ಅಲ್ಲಿ ಕಾಣಿಸುತ್ತವೆ. ಅವುಗಳಲ್ಲಿ 1543 ವಿಶ್ವದ ಬೇರೆಲ್ಲೂ ಕಾಣಸಿಗದ ಪ್ರಭೇದಗಳು. ‘ಮೇ ಫ್ಲವರ್’, ‘ಮೇ ಲಿಲಿ’ ಹೆಸರಿನಿಂದ ಕರೆಸಿಕೊಳ್ಳುವ ಆರ್ಕಿಡ್ (attleya trianae orchid) ರಾಷ್ಟ್ರಪುಷ್ಪದ ಗೌರವಕ್ಕೆ ಪಾತ್ರವಾಗಿದೆ. 1600ಕ್ಕೂ ಹೆಚ್ಚು ಬಗೆಯ ಹೂಗಳನ್ನು, 89 ದೇಶಗಳಿಗೆ ಒದಗಿಸುವ ಹಿರಿಮೆ ಈ ದೇಶದ್ದು.

ಆರ್ಥಿಕ ಹಾಗೂ ಮಿಲಿಟರಿ ಕ್ಷೇತ್ರಗಳಲ್ಲಿ ದೈತ್ಯಶಕ್ತಿಯ ಮೂಲಕ ವಿಶ್ವದ ದೊಡ್ಡಣ್ಣ ಎನ್ನಿಸಿಕೊಂಡಿರುವ ಅಮೆರಿಕ, ಕೊಲಂಬಿಯಾದ ಹೂಗಳ ಬಹುದೊಡ್ಡ ಫಲಾನುಭವಿಯೂ ಹೌದು. ಮುಕ್ತ ಮಾರುಕಟ್ಟೆ ಒಪ್ಪಂದಗಳಿಂದಾಗಿ ಎರಡೂ ದೇಶಗಳ ನಡುವಣ ಹೂಗಳ ವಹಿವಾಟಿಗೆ ಅನುಕೂಲವಾಗಿದೆ.

ಕೊಲಂಬಿಯಾದ ಪುಷ್ಪ ಪರಂಪರೆಗೆ ಸಾಂಸ್ಕೃತಿಕ ಹಿನ್ನೆಲೆಯಿದೆ. ಅಲ್ಲಿನ ಜನಜೀವನ ಹೂಗಳೊಂದಿಗೆ ಬೆರೆತುಹೋಗಿದೆ. ಅಲ್ಲಿನ ಜನರ ಪಾಲಿಗೆ ಹೂಗಳು ಸೌಂದರ್ಯ ಮತ್ತು ಸಂತೋಷದ ಮೂರ್ತರೂಪ. ಜನನ, ಮರಣ, ಹುಟ್ಟುಹಬ್ಬ, ಮದುವೆ – ಸಂದರ್ಭ ಯಾವುದಾದರೂ ಹೂಗಳ ಮೆರವಣಿಗೆ ಇದ್ದೇಇರಬೇಕು. ಭಾರತದಲ್ಲೂ ಈ ಹೂಸಂಸ್ಕೃತಿ ಇದೆ. ಆದರೆ, ಪುಷ್ಪಸಂಸ್ಕೃತಿಯನ್ನು ಬಹುದೊಡ್ಡ ವಹಿವಾಟಾಗಿಸುವುದು ನಮಗೆ ಸಾಧ್ಯವಾಗಿಲ್ಲ. ಹೂಗಳ ರಫ್ತಿನ ವಿಶ್ವನಕಾಶೆಯಲ್ಲಿ ಭಾರತದ್ದು ಹದಿನಾಲ್ಕನೇ ಸ್ಥಾನ.

ಪ್ರತಿಕ್ರಿಯಿಸಿ: feedback@sudha.co.in